ನಡೆದಳು. ಅವನು ತಕ್ಷಣವೇ ನಿಂತ. ಹಿಂತಿರುಗಿ ನೋಡಿದ. ಅವಳು ನಿಂತಳು. ಅವನು ಮುಂದೆ ನಡೆದು ಅಗಲಕಿರಿದಾದ ಗಲ್ಲಿಯೊಳಗೆ ನಡೆಯಲಾರಂಭಿಸಿದ. ಅವಳೂ ನಡೆದಳು. ಅವನು ಹಳೆಯ ಮರದ ಮೆಟ್ಟಿಲುಗಳ ಅಡಿಯಲ್ಲಿದ್ದ ಶಿಥಿಲವಾದ ಸಣ್ಣ ಬಾಗಿಲಿನ ಗೂಡಿನಂತಹ ಕೋಣೆಯನ್ನು ಹೊಕ್ಕ. ಬಾಗಿಲು ತೆರೆದೇ ಇತ್ತು. ಅವಳು ಅವನ ಅನುಮತಿಗಾಗಿ ಕಾಯಲಿಲ್ಲ. ಒಳಗೆ ನಡೆದಳು. ಅವನು ಬೀಣೆಯ ಮಂಚದ ಮೇಲೆ ಕುಳಿತು ಅವಳನ್ನೇ ನೋಡುತ್ತಿದ್ದ. ಅವಳು ಅವನನ್ನೇ ನೋಡುತ್ತಿದ್ದಳು. ಅವನು ಕರೆದ. ಅವಳು ಅವನ ಪಕ್ಕಕ್ಕೆ ನಿಂತು ಮಾಸ್ಕ್ ತೆಗೆದಳು. ಅವನು ಅವಳನ್ನು ಗುರುತಿಸಿದಂತೆ ಅಚ್ಚರಿ ತೋರಿಸಿದ. ಅವಳು ನಿರ್ಲಿಪ್ತಳಂತೆ ಅವನನ್ನು ದಿಟ್ಟಿಸುತ್ತಲೇ ಅತ್ತು ಬಿಟ್ಟಳು. ಅವಳಿಗಾದ ನೋವಿನ ಪರಿತಾಪವನ್ನು ಊಹಿಸಿಕೊಂಡ. ಅವಳು ಮಾತಾಡಲಿಲ್ಲ. ಆದರೆ ಅವಳ ವೇದನೆಯ ಸ್ವರೂಪ ಅವನಿಗೆ ಎಲ್ಲವನ್ನೂ ತಿಳಿಸಿತು. ಅವಳನ್ನು ಪಕ್ಕಕ್ಕೆ ಕರೆದು ಕುಳ್ಳಿರಿಸಿದ. ಅವನ ಸಾನಿಧ್ಯದಲ್ಲಿ ಅವಳು ದುಃಖವನ್ನೆಲ್ಲಾ ಮರೆತಂತೆ ಅವನ ಎದೆಗೆ ಒರಗಿದಳು. ಆ ರಾತ್ರಿ ಯಾವುದೇ ಕನಸುಗಳಿಲ್ಲದೆ ಅವಳು ಸುಖವಾಗಿ ನಿದ್ರಿಸಿದಳು. ಬೆಳಗ್ಗೆ ಎದ್ದಾಗ ಅವನು ಅಲ್ಲಿರಲಿಲ್ಲ, ಮಾಯಾವಾಗಿದ್ದ.

ಅವಳು ಹಾಗೆಯೇ ಕುಳಿತಿದ್ದಳು ಆ ದಿನವಿಡೀ... ಬಾಗಿಲು ಮಾತ್ರ ಮುಚ್ಚಿತ್ತು. ಕಿಟಕಿಯ ಮೂಲೆಯಿಂದ ಸಣ್ಣಗಿನ ಬೆಳಕು ಗಾಳಿ ಉಸಿರಾಡುವುದಕ್ಕೆ ಸಾಕಾಗಿತ್ತು. ಸಂಜೆಯ ಹೊತ್ತು ಯಾರೋ ಬಾಗಿಲು ದೂಡಿದಂತೆ ಕೇಳಿಸಿತು. ಅತ್ತ ಕಣ್ಣು ಹೊರಳಿಸಿದಳು. ಬಣ್ಣದ ನೋಟುಗಳನ್ನು ಹಿಡಿದು ಒಬ್ಬ ನಿಂತಿದ್ದ. ಅವಳು ಎದ್ದು ನಿಂತಳು. ಅವನು ನಡೆಯುತ್ತಾ ಮುಂದೆ ಸಾಗಿದ. ಅವಳು ಹಿಂಬಾಲಿಸಿದಳು. ಕಣ್ಮರೆಯಾದಳು.

ಸಂಜೆಯ ಹೊತ್ತು ಅವಳು ಅದೇ ಮರದ ಮೆಟ್ಟಿಲುಗಳ ಕೋಣೆಗೆ ಹಿಂತಿರುಗಿದಳು. ಅವಳು ಹಿಂಬಾಲಿಸಿಕೊಂಡು ಬಂದವನೂ ಅಲ್ಲಿಗೆ ಬಂದ. ಅವಳ ಮುಖದಲ್ಲಿದ್ದ ದುಃಖ ಬಹುತೇಕ ಮರೆಯಾಗಿತ್ತು. ಕೈಯಲ್ಲಿ ಒಂದಷ್ಟು ಬಣ್ಣ ಬಣ್ಣದ ನೋಟುಗಳು ತುಂಬಿದ್ದವು. ಅವನ್ನೆಲ್ಲಾ ಮಂಚದ ಮೇಲೆ ಸುರಿದು ಒಂದೊಂದಾಗಿಯೇ ಎಣಿಸತೊಡಗಿದಳು. ಮುಖದಲ್ಲಿ ತೃಪ್ತಿಯ ಕಳೆ ತುಂಬಿತ್ತು. ಅವನು ಅದನ್ನೇ ನೋಡುತ್ತಿದ್ದ. ಅವಳು ಅವನೆಡೆಗೆ ವಿಚಿತ್ರ ನೋಟ ಬೀರಿ ಅದನ್ನು ದಿಂಬಿನ ಅಡಿಗೆ ಸೇರಿಸಿದಳು. ಅವನು ದಿಂಬು ಸರಿಸಿ ಮಲಗಿಕೊಂಡ. ಅವಳು ದಿಂಬು ಎಳೆದು ಮಲಗಿಕೊಂಡಳು. ರಾತ್ರಿ ಎಚ್ಚರವಾಗಿ ತನ್ನ ದುಡಿಮೆಯ ಹಣವನ್ನು ಮುಟ್ಟಿ ನೋಡಿದಳು. ಅವು ಅಲ್ಲಿಯೇ ಬೆಲೆ ಕಳೆದುಕೊಂಡಂತೆ ಬಿದ್ದಿದ್ದವು. ತತ್‌ಕ್ಷಣವೇ ಪಕ್ಕಕ್ಕೆ ದೃಷ್ಟಿ ಹಾಯಿಸಿದಳು. ಅವನು ಇರಲಿಲ್ಲ. ಅವನು ವೇಷವನ್ನೆಲ್ಲಾ ಕಳಚಿ ಇಟ್ಟಿದ್ದ. ನಿದ್ದೆ ಹಾರಿ ಹೋಗಿ ಎದ್ದು ಕುಳಿತಳು. ಅರೆ ಕ್ಷಣ ತಾನೆಲ್ಲಿರುವೆನೆಂದು ತಿಳಿಯದಾಯಿತು. ಆದರೆ ಆತನ ಸಾನಿಧ್ಯ ತನಗೆ ಬೇಕೇಬೇಕೆನಿಸಿ ದುಃಖ ಒತ್ತರಿಸಿ ಬಂತು. ಅವನು ತನಗೇನು ಮೋಡಿ ಮಾಡಿದನೆನ್ನುವುದೂ ಆಕೆಗೆ ತಿಳಿಯಲಿಲ್ಲ. ಅವಳ ಸಂಪಾದನೆಯ ಹಣವನ್ನು ಆತ ಮುಟ್ಟರಲಿಲ್ಲ. ಅವನ ಬಗ್ಗೆ ಗೌರವ ಮೂಡಿತು. ಅವನು ಹಿಂತಿರುಗಿ ಬರುವನೆನ್ನುವ ಬಲವಾದ ನಂಬಿಕೆ ಹಾಗೆಯೇ ಉಳಿಯಿತು.

ಆ ದಿನವೂ ಅವಳು ಅಲ್ಲಿಯೇ ಉಳಿದಳು. ಬೆಳಗು ಹರಿದು ಮಧ್ಯಾಹ್ನವಾಗುತ್ತಲೇ ಯಾರೋ ಹೊರಗೆ ನಿಂತು ಸಿಳ್ಳೆ ಹಾಕಿದ್ದು ಕೇಳಿಸಿತು. ಅವಳು ಎದ್ದು ಹೊರಗೆ ಬಂದಳು. ಯಾರೋ ಅಪರಿಚಿತ ಪರ್ಸ್ ತೆಗೆದು ಬಣ್ಣಬಣ್ಣದ ನೋಟುಗಳನ್ನು ತೆಗೆದು ನೋಡುತ್ತಿದ್ದ. ಅವಳು ಬಾಗಿಲನ್ನು ಮುಚ್ಚಿ ಅವನ ಹಿಂದೆಯೇ ನಡೆದಳು.

ರಾತ್ರಿಯಾಗಿತ್ತು. ಅವಳು ಅದೇ ಕೋಣೆಗೆ ಬಂದಳು ಆ ಕೋಣೆಯ ಮಾಲೀಕ ಬರಬಹುದೆನ್ನುವ ನಿರೀಕ್ಷೆಯಲ್ಲಿ. ಅವನು ಬಂದ. ಅವಳ ಮುಖದಲ್ಲಿ ಸಂತಸದ ಹೊನಲು ಹರಿಯಿತು. ಅವನು ಏನನ್ನೋ ತಂದಿದ್ದ. ಅವಳಿಗೂ ಹಂಚಿ ತಾನೂ ತಿಂದ. ಒಂದೇ ಮಂಚದಲ್ಲಿ ಇಬ್ಬರೂ ಮಲಗಿದರು.

ಬೆಳಗಾಗುತ್ತಲೇ ಅವರಿಬ್ಬರೂ ವಿರುದ್ಧ ದಿಕ್ಕಿನಲ್ಲಿ ನಡೆದು ಹೋದರು. ಅವರೆಷ್ಟು ದೂರ ಹೋದರೋ ಹಾಗೆಯೇ ಹಿಂದಕ್ಕೆ ಬಂದು ಅರಳಿಕಟ್ಟೆಯ ಮೇಲೆ ಕುಳಿತಾಗ ಸಾಧುವೊಬ್ಬ ಗೋಚರಿಸಿದ. ಅವನು ಅದೇನು ಹೇಳಿದನೋ ಪರಮ ಸ್ವಲ್ಪ ಹೊತ್ತು ಮಂಕಾಗಿ ಕೂತ; ಪ್ರತ್ಯಕ್ಷ ಯೋಚಿಸಿದಳು. ಕೊನೆಗೆ ಇಬ್ಬರೂ ಒಂದು ನಿರ್ಧಾರಕ್ಕೆ ಬಂದಂತೆ ಭವದ ಆಸೆಗಳನ್ನೆಲ್ಲಾ ತೊರೆದು ಆ ಸಾಧುವಿನ ಹಿಂದೆಯೇ ನಡೆದರು. ●